# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 41 ಫ್ರಾ.ಸಾ. : 16**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಎಸ್. ನಾಯ್ಕ |
| ತಂದೆಯ ಹೆಸರು | : | ಸುಕ್ರು ನಾಯ್ಕ |
| ವಯಸ್ಸು | : | 57 ವರ್ಷ |
| ಕೆಲಸ | : | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹೊನ್ನಾವರ |
| ವಾಸ | : | ಹೊನ್ನಾವರ. |

**ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2008 ರಿಂದ ಇಲ್ಲಿಯ ವರೆಗೆ ನಾನು ಹೊನ್ನಾವರದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಕಟ್ಟಡಗಳ ಹಾಗೂ ಜಮೀನುಗಳ ನಕಾಶೆಯನ್ನು ತಯಾರಿಸುವ ಅನುಭವ ಇರುತ್ತದೆ ಹಾಗೂ ನಾನು ಈಗಾಗಲೇ ಹಲವಾರು ಅಪರಾಧಿಕ ಪ್ರಕರಣದಲ್ಲಿ ನಕಾಶೆಯನ್ನು ತಯಾರಿಸಿ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಹಾಗೂ ಸಾಕ್ಷಿ ನುಡಿದಿರುತ್ತೇನೆ.

2. ದಿ.15-05-2021 ರಂದು ಪೊಲೀಸ್ ವೃತ್ತ ನಿರೀಕ್ಷಕರು, ಹೊನ್ನಾವರ ರವರಿಂದ ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರಿಗೆ ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ಈ ಪ್ರಕರಣದ ಘಟನಾ ಸ್ಥಳವಾದ ಜನತಾ ಕಾಲೋನಿಯಲ್ಲಿರುವ ಚಾಸಾ-11 ರವರ ಮನೆಯ ಮುಂದಿನ ಸ್ಥಳ ಹಾಗೂ ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಆತ ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಬಚ್ಚಿಟ್ಟ ಸ್ಥಳವಾದ ಚಂದಾರವದ ಹೊಳೆಯ ಸೇತುವೆಯ

ಕೆಳಗಿನ ಸ್ಥಳದ ನಕಾಶೆಗಳನ್ನು ತಯಾರಿಸಿಕೊಡುವಂತೆ ಎರಡು ಕೋರಿಕೆ ಪತ್ರಗಳಲ್ಲಿ ಕೋರಿಕೊಂಡಿರುತ್ತಾರೆ. ಅದರಂತೆ, ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರು ನನಗೆ ದಿ.25-05-2021 ರಂದು ಸದರಿ ಸ್ಥಳಗಳ ನಕಾಶೆ ತಯಾರಿಸಿ ನೀಡುವಂತೆ ಲಿಖಿತ ಪತ್ರದ ಮೂಲಕ ಸೂಚಿಸಿರುತ್ತಾರೆ. ಆದರೆ, ಆ ಸಮಯದಲ್ಲಿ ನನಗೆ ಕೋವಿಡ್ ಪಾಸಿಟಿವ್ ಇದ್ದ ಕಾರಣ, ಆ ಕೂಡಲೇ ಸ್ಥಳಕ್ಕೆ ಹೋಗಿ, ನಕಾಶೆ ತಯಾರಿಸಿ ನೀಡಲು ಸಾಧ್ಯವಾಗಿರುವುದಿಲ್ಲ. ಆನಂತರ ದಿ.28-07-2021 ರಂದು ಪೊಲೀಸ್ ಸಿಬ್ಬಂದಿಯಾದ ಉದಯ ಮಗದೂರು ಎನ್ನುವವರು ನಮ್ಮ ಕಚೇರಿಗೆ ಬಂದು, ಮೇಲೆ ಹೇಳಿದ ಸ್ಥಳಗಳಿಗೆ ನನ್ನನ್ನು ಕರೆದುಕೊಂಡು ಹೋಗಿ, ಸದರಿ ಸ್ಥಳಗಳನ್ನು ತೋರಿಸಿದ ಮೇರೆಗೆ, ನಾನು ಸದರಿ ಎರಡೂ ಸ್ಥಳಗಳನ್ನು ಪರಿಶೀಲಿಸಿ, ಸ್ಥಳದಲ್ಲಿಯೇ ನಕಾಶೆ ತಯಾರಿಸಿ, ಸದರಿ ನಕಾಶೆಗೆ ಸಹಿ ಮಾಡಿ, ನಂತರ ನಾನು ಸದರಿ ನಕಾಶೆಗಳನ್ನು ನಮ್ಮ ಕಾರ್ಯನಿರ್ವಾಹಕ ಅಭಿಯಂತರವರ ಪರವಾಗಿ ದಿ.28-07-2021 ರಂದು ಕವಚ ಪತ್ರದೊಂದಿಗೆ ಹೊನ್ನಾವರದ ಪೊಲೀಸ್ ವೃತ್ತ ನಿರೀಕ್ಷಕರಿಗೆ ಕಳುಹಿಸಿರುತ್ತೇನೆ. ಸದರಿ ನಕಾಶೆಗಳಿಗೆ ನನ್ನನ್ನು ಕರೆದುಕೊಂಡು ಹೋದ ಪೊಲೀಸ್ ಸಿಬ್ಬಂದಿಯೂ ಸಹ ಸಹಿ ಮಾಡಿರುತ್ತಾರೆ. ಸಾಕ್ಷಿಯು ತಾನು ತಯಾರಿಸಿದ ನಕಾಶೆಗಳನ್ನು ಹಾಗೂ ಕವಚ ಪತ್ರವನ್ನು ನೋಡಿ ಗುರುತಿಸಿದ್ದು, ನಕಾಶೆಗಳನ್ನು ನಿಪಿ-69 ಮತ್ತು ಪಿ-70 ಎಂದು, ಸಾಕ್ಷಿಯ ಸಹಿಯನ್ನು ನಿಪಿ-69(ಎ) ಮತ್ತು 70(ಎ) ಎಂದು, ಕವಚ ಪತ್ರವನ್ನು ನಿಪಿ-71 ಎಂದು, ಸಾಕ್ಷಿಯ ಸಹಿಯನ್ನು ನಿಪಿ-71(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಮ್ಮ ಕಚೇರಿಗೆ ಬಂದ ಎರಡು ಕೋರಿಕೆ ಪತ್ರಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-72 ಮತ್ತು ಪಿ-73 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-</u>**

3. ಘಟನಾ ಸ್ಥಳದ ಸುತ್ತ ಮುತ್ತ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು, ಸಣ್ಣಪುಟ್ಟ ಗಿಡಗಳು ಇದ್ದು, ಮನೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಚಾಸಾ-14 ರವರ ಮನೆಯ ಕಂಪೌಂಡಿನಲ್ಲಿ ಸಣ್ಣಪುಟ್ಟ ಗಿಡಗಳು ಇದ್ದು, ಅವುಗಳನ್ನು ನಕಾಶೆಯಲ್ಲಿ ತೋರಿಸಿಲ್ಲ. ನಾನು ಯಾವುದೇ ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ಯಾವುದೇ ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ